<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1643

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 14-03-2022

ಉತ್ತರಿಸುವವರು : ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಕಾಡು ಪ್ರಾಣಿ ದಾಳಿಯಿಂದ ಜನರ ಜೀವಹಾನಿ ಮತ್ತು ದೈಹಿಕ ಹಾನಿಯನ್ನು ಅನುಭವಿಸಿದ ಪ್ರಕರಣಗಳ ಸಂಖ್ಯೆ ಎಷ್ಟು; ಈ ಪ್ರಕರಣಗಳಲ್ಲಿ ಮಂಜೂರಾದ, ಬಿಡುಗಡೆ ಮಾಡಿದ ಮತ್ತು ಬಾಕಿ ಇರುವ ಪರಿಹಾರ ಧನದ ಮೊತ್ತವೆಷ್ಟು; (ಜಿಲ್ಲಾವಾರು ವರ್ಷವಾರು ಮಾಹಿತಿ ನೀಡುವುದು) | ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಮಾನವ-ಪ್ರಾಣ ಹಾನಿ ಪ್ರಕರಣ ಮತ್ತು ಪಾವತಿಸಿದ ದಯಾತ್ಮಕ ಧನದ ಜಿಲ್ಲಾವಾರು, ವರ್ಷವಾರು ವಿವರವನ್ನು ಅನುಬಂಧ-1ರಲ್ಲಿ ಹಾಗೂ ಮಾನವ ಗಾಯ ಪ್ರಕರಣ ಮತ್ತು ಪಾವತಿಸಿದ ದಯಾತ್ಮಕ ಧನದ ಜಿಲ್ಲಾವಾರು ವರ್ಷವಾರು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.<br><br>2021-22ನೇ ಸಾಲಿನಲ್ಲಿ 02 ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಅಗತ್ಯ ದಾಖಲೆಗಳು ಸ್ವೀಕೃತವಾಗಬೇಕಾಗಿರುವುದರಿಂದ ದಯಾತ್ಮಕ ಧನ ಪಾವತಿಸುವುದು ಬಾಕಿ ಇರುತ್ತದೆ.<br><br>ರಾಜ್ಯದಲ್ಲಿ 2021-22 ನೇ ಸಾಲಿಗೆ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಮಾನವ ಗಾಯ ಪ್ರಕರಣಗಳು ಒಳಗೊಂಡಂತೆ ಇತರೆ ಪ್ರಕರಣಗಳಿಗೆ ದಯಾತ್ಮಕ ಧನ ಪಾವತಿಸಲು ರೂ.1342.52 ಲಕ್ಷಗಳು ಬಾಕಿ ಇರುತ್ತದೆ. |
| ಆ) | ರಾಜ್ಯದ ಯಾವ ಭಾಗದಲ್ಲಿ ಅತಿಯಾಗಿ ಕಾಡು ಪ್ರಾಣಿಗಳ ಹಾವಳಿ ಕಂಡು ಬಂದಿದೆ; ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ಪ್ರಮುಖವಾಗಿ ಕೊಡಗು, ಹಾಸನ, ರಾಮನಗರ, ಚಾಮರಾಜನಗರ, ಚಿಕ್ಕಮಗಳೂರು ಮೈಸೂರು, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ವನ್ಯಪ್ರಾಣಿಗಳ ಹಾವಳಿ ಕಂಡುಬಂದಿರುತ್ತದೆ.<br><br>ವನ್ಯಪ್ರಾಣಿಗಳ ಹಾವಳಿ ತಡೆಗಟ್ಟಲು : ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-<br><br>1. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | 2. ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು, ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>3. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br><br>4. ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು ರಚಿಸಿ ನಿರ್ವಹಿಸಲಾಗುತ್ತಿದೆ.<br><br>5. ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br><br>6. ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br><br>7. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br><br>8. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 9. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.<br>10. ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿ ಪ್ರಕರಣಗಳಲ್ಲಿ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದ್ದು. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ, ಶೀಘ್ರವೇ ನೇರವಾಗಿ ಸಂತ್ರಸ್ಥರ ಖಾತೆಗೆ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ. |
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ 3 ವರ್ಷಗಳ ಹಿಂದ ರೈತರಿಂದ ಕಾಡುಪ್ರಾಣಿಗಳಿಂದ ಬೆಳೆ ನಾಶದ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಗಳಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿದ್ದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಕೋರಿದ ಪರಿಹಾರ ಧನದ ಮೊತ್ತವೆಷ್ಟು; ಅವುಗಳಲ್ಲಿ ಈ ದಿನಾಂಕದವರೆಗೂ ಬಾಕಿಯಿರುವ ಅರ್ಜಿಗಳ ಸಂಖ್ಯೆ ಹಾಗೂ ಪರಿಹಾರ ಧನದ ಮೊತ್ತವೆಷ್ಟು; (ವರ್ಷ, ಜಿಲ್ಲೆ ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಿಂದ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆ ಹಾನಿ ಪ್ರಕರಣಗಳಿಗೆ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಗಳಲ್ಲಿ ಪಾವತಿಸಿದ ಪರಿಹಾರ ಧನದ ವಿವರ ಹಾಗೂ ಪರಿಹಾರ ಪಾವತಿಸಲು ಬಾಕಿ ಇರುವ ಪ್ರಕರಣಗಳ ವರ್ಷ, ಜಿಲ್ಲೆ ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ. |
| ಈ) | ಈ ಪರಿಹಾರ ಧನ ಕೋರಿ ಸಲ್ಲಿಸಿದ ಅರ್ಜಿಯನ್ನು ಸಕಾಲ ಕಾಯಿದೆ ವ್ಯಾಪ್ತಿಗೆ ತರುವ ಉದ್ದೇಶ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ಕಾರಣವೇನು? | ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಲ್ಲಿ ಪರಿಹಾರ ಧನ ಪಾವತಿಸಲು ಅರ್ಜಿಗಳನ್ನು "ಸಕಾಲ" ಕಾಯ್ದೆಯ ವ್ಯಾಪ್ತಿಗೆ ತರಲಾಗಿರುತ್ತದೆ. |

ಸಂಖ್ಯೆ: ಅಪಜೀ 54 ಎಫ್‌ಡಬ್ಲ್ಯೂಎಲ್ 2022

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಅನುಬಂಧ - 1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ ಇವರ ಪ್ರಶ್ನೆ ಸಂಖ್ಯೆ: 1643ಕ್ಕೆ ಉತ್ತರ

| ಕ್ರ. ಸಂ | ವಿಭಾಗ | ಮಾನವ ಪ್ರಾಣ ಹಾನಿ | | | | | |
|---|---|---|---|---|---|---|---|
| | | 2019-20 | | 2020-21 | | 2021-22 (28-02-2022ರ ವರೆಗೆ) | |
| | | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ |
| 1. | ರಾಮನಗರ | 2 (ಆನೆ) | 10.00 | 2 (ಚಿರತೆ) | 15.00 | | |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | | | | | | | |
| 2. | ಬೆಂಗಳೂರು ಗ್ರಾಮಾಂತರ | 1 (ಆನೆ) | 5.00 | - | - | - | - |
| 3. | ಬನ್ನೇರುಘಟ್ಟ ರಾ.ಉ | 1 (ಆನೆ) | 7.50 | 1 (ಆನೆ) | 7.50 | 02 (ಆನೆ) | 15.00 |
| | | | | | | | |
| 4. | ಕೋಲಾರ | 4 (ಆನೆ) | 30.00 | 3 (ಆನೆ) | 22.50 | 02 (ಆನೆ) | 15.00 |
| 5. | ಚಿಕ್ಕಬಳ್ಳಾಪುರ | - | - | - | - | - | - |
| 6. | ಬೆಳಗಾವಿ | - | - | - | - | - | - |
| 7. | ಬಾಗಲಕೋಟೆ | 1 (ಮೊಸಳೆ) | 5.00 | 1 (ಮೊಸಳೆ) | 7.50 | - | - |
| 8. | ಬಿಜಾಪುರ | - | - | 1 (ತೋಳ) | 7.50 | - | - |
| 9. | ಬಳ್ಳಾರಿ | 1 (ಕರಡಿ)<br>1 (ಮೊಸಳೆ) | 12.50 | - | - | 1 (ಮೊಸಳೆ) | 7.50 |
| 10. | ಚಿತ್ರದುರ್ಗ | 1 (ಕರಡಿ) | 5.00 | - | - | - | - |
| 11. | ದಾವಣಗೆರೆ | - | - | - | - | - | - |
| 12. | ಕೊಪ್ಪಳ | - | - | 2 (ಚಿರತೆ) | 15.00 | - | - |
| ಚಾಮರಾಜನಗರ ಜಿಲ್ಲೆ | | | | | | | |
| 13. | ಬಿ.ಆರ್.ಟಿ | 1 (ಆನೆ) | 5.00 | 2 (ಆನೆ) | 15.00 | - | - |
| 14. | ಕಾವೇರಿ | 1 (ಆನೆ) | 5.00 | 1 (ಆನೆ) | 7.50 | - | - |
| 15. | ಮಲೈ ಮಹದೇಶ್ವರ | 4 (ಆನೆ) | 20.00 | 1 (ಆನೆ) | 7.50 | - | - |
| 16. | ಬಂಡೀಪುರ | 3 (ಆನೆ)<br>2 (ಹುಲಿ) | 27.50 | 3 (ಆನೆ) | 22.50 | - | - |
| ಚಿಕ್ಕಮಗಳೂರು ಜಿಲ್ಲೆ | | | | | | | |
| 17. | ಚಿಕ್ಕಮಗಳೂರು | 2 (ಆನೆ)<br>1 (ಕಾಡುಹಂದಿ) | 15.00 | - | - | 01 (ಆನೆ) | 7.50 |
| 18. | ಭದ್ರಾ | - | - | - | - | - | - |
| 19. | ಕೊಪ್ಪ | 2 (ಕಾಡುಕೋಣ) | 12.50 | - | - | - | - |
| | | | | | | | |
| 20. | ಧಾರವಾಡ | - | - | - | - | - | - |
| 21. | ಗದಗ | - | - | - | - | - | - |
| 22. | ಹಾವೇರಿ | - | - | - | - | - | - |
| 23. | ಬೀದರ್ | 1 (ಕರಡಿ) | 7.50 | - | - | - | - |

| | | | | | | | |
|---|---|---|---|---|---|---|---|
| 24. | ಕಲುಬರಗಿ | 1 (ಕಾಡುಹಂದಿ) | 5.00 | 1 (ಕಾಡುಹಂದಿ) | 7.50 | - | - |
| 25. | ರಾಯಚೂರು | 1 (ತೋಳ) | 7.50 | 2 (ಮೊಸಳೆ) | 15.00 | - | - |
| 26. | ಯಾದಗಿರಿ | 1 (ಮೊಸಳೆ) | 5.00 | 1 (ಮೊಸಳೆ) | 7.50 | – | – |
| ಹಾಸನ ಜಿಲ್ಲೆ | | | | | | | |
| 27. | ಹಾಸನ | 3 (ಆನೆ) | 15.00 | 5 (ಆನೆ) | 37.50 | 03 (ಆನೆ) | 22.50 |
| ತುಮಕೂರು ಜಿಲ್ಲೆ | | | | | | | |
| 28. | ತುಮಕೂರು | 1 (ಆನೆ)<br>4 (ಚಿರತೆ) | 32.50 | 2 (ಚಿರತೆ) | 15.00 | – | - |
| ಕೊಡಗು ಜಿಲ್ಲೆ | | | | | | | |
| 29. | ಮಡಿಕೇರಿ | 2 (ಆನೆ) | 12.50 | 4 (ಆನೆ) | 30.00 | 05 (ಆನೆ)<br>1 (ಕಾಡುಕೋಣ) | 45.00 |
| 30. | ವಿರಾಜಪೇಟೆ | 1 (ಆನೆ)<br>1 (ಕಾಡುಕೋಣ) | 12.50 | 3 (ಆನೆ)<br>3 (ಹುಲಿ) | 45.00 | 02 (ಆನೆ) | 15.00 |
| 31. | ಮಡಿಕೇರಿ ವಜೀ | 1 (ಆನೆ) | 5.00 | – | – | - | - |
| ಉಡುಪಿ ಜಿಲ್ಲೆ | | | | | | | |
| 32. | ಕುಂದಾಪುರ | 1 (ಜಿಂಕೆ)<br>2 (ಕಾಡುಕೋಣ) | 15.00 | - | - | – | – |
| | | | | | | | |
| 33. | ಮಂಡ್ಯ | – | – | - | - | – | – |
| ಮೈಸೂರು ಜಿಲ್ಲೆ | | | | | | | |
| 34. | ಮೈಸೂರು | 2 (ಆನೆ) | 12.50 | 1 (ಆನೆ) | 7.50 | - | - |
| 35. | ನಾಗರಹೊಳೆ | – | – | (1 ಹುಲಿ) | 7.50 | 2 (ಆನೆ)<br>(1 ಹುಲಿ) | 22.50 |
| ಶಿವಮೊಗ್ಗ ಜಿಲ್ಲೆ | | | | | | | |
| 36. | ಭದ್ರಾವತಿ | – | – | 1 (ಕರಡಿ) | 7.50 | – | – |
| | ಒಟ್ಟು | 50 | 272.50 | 41 | 307.50 | 20 | 150.00 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) & ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

ಅನುಬಂಧ-2

| ಕ್ರ. ಸಂ | ವಿಭಾಗ | ಮಾನವ ಗಾಯ | | | | | |
|---|---|---|---|---|---|---|---|
| | | 2019-20 | | 2020-21 | | 2021-22 (31-12-2022ರ ವರೆಗೆ) | |
| | | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ |
| 1. | ರಾಮನಗರ | 02 | 45,722 | 25 | 25,37,000 | 02 | 65,000 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | | | | | | | |
| 2. | ಬೆಂಗಳೂರು ಗ್ರಾಮಾಂತರ | 03 | 18,080 | - | - | - | - |
| 3. | ಬನ್ನೇರುಘಟ್ಟ ರಾ.ಉ | 01 | 9,972 | 01 | 60,000 | - | - |
| | | | | | | - | - |
| 4. | ಕೋಲಾರ | 02 | 8,52,200 | – | – | - | - |
| 5. | ಬೆಳಗಾವಿ | 05 | 3,02,200 | – | – | - | - |
| 6. | ಬಿಜಾಪುರ | 01 | 1,06,900 | 01 | 30,000 | - | - |
| 7. | ಬಳ್ಳಾರಿ | 07 | 2,94,017 | 04 | 1,91,989 | - | - |
| 8. | ಚಿತ್ರದುರ್ಗ | – | – | 06 | 1,10,863 | - | - |
| 9. | ದಾವಣಗೆರೆ | 04 | 2,76,178 | 08 | 2,70,127 | - | - |
| 10. | ಕೊಪ್ಪಳ | - | - | 14 | 5,53,000 | - | - |
| ಚಾಮರಾಜನಗರ ಜಿಲ್ಲೆ | | | | | | | |
| 11. | ಬಿ.ಆರ್.ಟಿ | 07 | 82,698 | 09 | 1,96,000 | 03 | 1,03,700 |
| 12. | ಕಾವೇರಿ | – | – | 02 | 59,542 | 02 | 60,000 |
| 13. | ಮಲೈ ಮಹದೇಶ್ವರ | 01 | 62,937 | 01 | 10,671 | 01 | 52,821 |
| 14. | ಬಂಡೀಪುರ | 11 | 1,34,583 | 14 | 2,69,912 | 07 | 2,18,000 |
| ಚಿಕ್ಕಮಗಳೂರು ಜಿಲ್ಲೆ | | | | | | | |
| 15. | ಚಿಕ್ಕಮಗಳೂರು | 02 | 2,52,000 | 04 | 1,50,000 | 03 | 3,15,000 |
| 16. | ಕೊಪ್ಪ | 02 | 46,140 | 02 | 60,000 | 03 | 2,86,000 |
| | | | | | | | |
| 17. | ಗದಗ | - | - | 01 | 30,000 | - | - |
| 18. | ಹಾವೇರಿ | 04 | 30,000 | 03 | 36,000 | - | - |
| 19. | ಬೀದರ್ | - | - | 04 | 1,10,000 | 02 | 1,30,000 |
| 20. | ಕಲುಬರಗಿ | - | - | 04 | 1,20,000 | 05 | 2,67,371 |
| 21. | ರಾಯಚೂರು | - | - | 26 | 7,30,000 | 03 | 60,000 |
| 22. | ಯಾದಗಿರಿ | 02 | 60,000 | 08 | 2,40,000 | 04 | 78,000 |

| | | | | | | | |
|---|---|---|---|---|---|---|---|
| ಹಾಸನ ಜಿಲ್ಲೆ | | | | | | | |
| 23. | ಹಾಸನ | 04 | 97,662 | 03 | 65,313 | 02 | 78,256 |
| ತುಮಕೂರು ಜಿಲ್ಲೆ | | | | | | | |
| 24. | ತುಮಕೂರು | 26 | 11,89,064 | 16 | 16,55,612 | 21 | 9,20,330 |
| ಕೊಡಗು ಜಿಲ್ಲೆ | | | | | | | |
| 25. | ಮಡಿಕೇರಿ | 04 | 1,81,000 | 03 | 5,31,000 | 01 | 30,000 |
| 26. | ವಿರಾಜಪೇಟೆ | 07 | 1,91,000 | 02 | 2,44,044 | 01 | 29,500 |
| 27. | ಮಡಿಕೇರಿ ವಜೀ | 01 | 11,000 | - | - | - | - |
| ಉಡುಪಿ ಜಿಲ್ಲೆ | | | | | | | |
| 28. | ಕುಂದಾಪುರ | 06 | 1,61,000 | - | - | 04 | 1,20,000 |
| 29. | ಮಂಗಳೂರು | 01 | 53,826 | - | - | 02 | 78,350 |
| ಉತ್ತರ ಕನ್ನಡ ಜಿಲ್ಲೆ | | | | | | | |
| 30. | ದಾಂಡೇಲಿ | 01 | 20,000 | 01 | 30,000 | - | - |
| 31. | ಹಳಿಯಾಳ | 02 | 53,000 | 06 | 87,500 | 02 | 56,050 |
| 32. | ಹೊನ್ನಾವರ | 03 | 50,000 | 03 | 87,900 | 01 | 30,000 |
| 33. | ಯಲ್ಲಾಪುರ | 01 | 5,000 | 02 | 60,000 | - | - |
| ಮೈಸೂರು ಜಿಲ್ಲೆ | | | | | | | |
| 34. | ಮೈಸೂರು | 06 | 1,65,150 | 03 | 1,38,471 | - | - |
| 35. | ನಾಗರಹೊಳೆ | 04 | 74,628 | 06 | 1,45,000 | 02 | 54,630 |
| ಶಿವಮೊಗ್ಗ ಜಿಲ್ಲೆ | | | | | | | |
| 36. | ಭದ್ರಾವತಿ | 01 | 18,700 | 10 | 10,91,316 | - | - |
| 37. | ಶಿವಮೊಗ್ಗ | 01 | 30,000 | 01 | 30,000 | - | - |
| 38. | ಸಾಗರ | - | - | 01 | 30,000 | - | - |
| | **ಒಟ್ಟು** | **122** | **48,75,013** | **195** | **99,92,000** | **71** | **30,33,008** |

11/3/22

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) & ಮುಖ್ಯ ವನ್ಯಜೀವಿ ಪರಿಪಾಲಕರು.
ಕರ್ನಾಟಕ, ಬೆಂಗಳೂರು.

ಅನುಬಂಧ -3

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ 3 ವರ್ಷಗಳ ಹಿಂದೆ ರೈತರಿಂದ ಕಾಡುಪ್ರಾಣಿಗಳಿಂದ ಬೆಳೆ ನಾಶದ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಗಳಲ್ಲಿ ಬಾಕಿ ಇರುವ ಪರಿಹಾರ ಧನದ ಮೊತ್ತ. ಅನುಭಂದ-3

| ಕ್ರ. ಸಂಖ್ಯೆ | ವರ್ಷ | ಜಿಲ್ಲೆ | ತಾಲೂಕು | ಪರಿಹಾರ ಕೋರಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ | ಕೋರಿದ ಪರಿಹಾರದ ಮೊತ್ತ ರೂ.ಗಳಲ್ಲಿ | ಬಾಕಿ ಇರುವ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಪರಿಹಾರ ಧನದ ಮೊತ್ತ ರೂ.ಗಳಲ್ಲಿ |
|---|---|---|---|---|---|---|---|
| 1 | 2018-19 | ಉಡುಪಿ | ಕುಂದಾಪುರ | 202 | 12,08,128 | | |
| | | | ಉಡುಪಿ | 27 | 1,27,320 | | |
| | | | ಕಾರ್ಕಳ | 38 | 2,15,080 | | |
| | | ದ.ಕ | ಮಂಗಳೂರು | 2 | 16,200 | | |
| | | | ಬೆಳ್ತಂಗಡಿ | 5 | 20,920 | | |
| | | | | 274 | 15,87,648 | | |
| 2 | 2019-20 | ಉಡುಪಿ | ಬೈಂದೂರು | 15 | 87,900 | | |
| | | | ಕುಂದಾಪುರ | 81 | 4,64,156 | | |
| | | | ಉಡುಪಿ | 8 | 44,700 | | |
| | | | ಕಾರ್ಕಳ | 17 | 90,600 | | |
| | | ದ.ಕ | ಮೂಡಬಿದ್ರೆ | 1 | 6,600 | | |
| | | | ಬೆಳ್ತಂಗಡಿ | 4 | 12,000 | | |
| | | | | 126 | 7,05,956 | | |
| 3 | 2020-21 | ಉಡುಪಿ | ಬೈಂದೂರು | 63 | 2,94,145 | 10 | 57,566 |
| | | | ಕುಂದಾಪುರ | 234 | 14,24,100 | 87 | 5,11,378 |
| | | | ಉಡುಪಿ | 27 | 1,28,380 | | |
| | | | ಕಾರ್ಕಳ | 20 | 1,40,460 | | |
| | | | ಬ್ರಹ್ಮಾವರ | 19 | 81,270 | | |
| | | | ಹೆಬ್ರಿ | 12 | 68,740 | | |
| | | ದ.ಕ | ಮೂಡಬಿದ್ರೆ | 7 | 52,960 | | |
| | | | | 382 | 21,90,055 | 97 | 5,68,944 |
| 4 | 2021-22 | ಉಡುಪಿ | ಬೈಂದೂರು | 17 | 93,051 | 34 | 90,000 |
| | | | ಕುಂದಾಪುರ | 95 | 5,49,450 | 89 | 4,28,944 |
| | | | ಉಡುಪಿ | 1 | 5,940 | | |
| | | | ಕಾರ್ಕಳ | 5 | 31,120 | 16 | 83,880 |
| | | | ಬ್ರಹ್ಮಾವರ | 4 | 21,278 | | |
| | | | ಹೆಬ್ರಿ | 1 | 5,280 | 34 | 1,70,000 |
| | | ದ.ಕ | ಮೂಡಬಿದ್ರೆ | 1 | 9,030 | | |
| | | | ಬೆಳ್ತಂಗಡಿ | 3 | 39,630 | 2 | 26,000 |
| | | | | 127 | 7,54,779 | 175 | 7,98,824 |
| | | | | | | 272 | 13,67,768 |

11/3/22

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) & ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.